# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## <u>ಯಶವಂತಪುರ ಹೆರಿಗೆ ಆಸ್ಪತ್ರೆ</u>

## ಮಾಹಿತಿ ಹಕ್ಕು ಕಾಯ್ದೆ – 2005 ಸಿಕ್ಷನ್ 4(1) (ಬಿ)ರ ಅನ್ವಯ ಪ್ರಕಟಿಸಿದ್ದು

1. <u>ಯಶವಂತಪುರ ಹೆರಿಗೆ ಆಸ್ಪತ್ರೆ ಕಾರ್ಯಗಳು ಮತ್ತು ಕರ್ತವ್ಯಗಳು:</u>

ಅ.√ ಕಛೇರಿಯ ಹೆಸರು : ಯಶವಂತಪುರ ಕಾರ್ಪೋರೇಶನ್ ಹೆರಿಗೆ ಆಸ್ಪತ್ರೆ, ಯಶವಂತಪುರ ರೈಲ್ವೆ ಸ್ಟೇಷನ್– ಹತ್ತಿರ, ಯಶವಂತಪುರ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು –22

ಆ. √ ರಚನೆ :

- ಆಯುಕ್ತರು
- ↓
- ಅಪರ ಆಯುಕ್ತರು(Admn.)
- ↓
- ಜಂಟಿ ಆಯುಕ್ತರು (ಪಶ್ಚಿಮ) | ಜಂಟಿ ಆಯುಕ್ತರು (ಆರೋಗ್ಯ)
- ↓
- ಉಪ ಆಯುಕ್ತರು (ಆರೋಗ್ಯ)
- ↓
- ಮುಖ್ಯ ಆರೋಗ್ಯಾಧಿಕಾರಿಗಳು
- ↓
- ಆರೋಗ್ಯಾಧಿಕಾರಿಗಳು (ತಾ.ಮ.ಆ) (ಪಶ್ಚಿಮ)
- ↓
- ಅಧೀಕ್ಷಕರು, ಶ್ರೀರಾಮಪುರ ರೆಫರಲ್ ಆಸ್ಪತ್ರೆ
- ↓
- ಸಹಾಯಕ ಶಸ್ತ್ರ ಚಿಕಿತ್ಸಕರು
- ↓
- ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು
- ↓
- ದ್ವಿತೀಯ ದರ್ಜೆ ಸಹಾಯಕರು
- ↓
- ಆಯಾ – ಪೌರ ಕಾರ್ಮಿಕರು

**1 (2) ಈ ಆಸ್ಪತ್ರೆಯಲ್ಲಿ ದೊರೆಯುವ ಸೇವಾಸೌಲಭ್ಯಗಳ ವಿವರಗಳು:–**

## ಅ. ಹೊರ ರೋಗಿಗಳ ಸೇವೆಗಳು

- ಸಂತಾನೋತ್ಪತ್ತಿ ಹಾಗೂ ಮಗುವಿನ ಆರೋಗ್ಯ ಕಾರ್ಯಕ್ರಮ
  1.) ಗರ್ಭಿಣಿ ಆರೈಕೆ.
  2.) ಬಾಣಂತಿ ಆರೈಕೆ.
  3.) ಕುಟುಂಬ ಕಲ್ಯಾಣ ಕಾರ್ಯಕ್ರಮ.
- ರಕ್ಷಣಾ ಚಿಕಿತ್ಸೆ (ಏಳು ಮಾರಕ ರೋಗಗಳನ್ನು ತಡೆಗಟ್ಟಲು ಲಸಿಕಾ ಕಾರ್ಯಕ್ರಮ)
- ಹೆಚ್,ಐ.ವಿ. / ಏಡ್ಸ್ ಬಗ್ಗೆ ಆಪ್ತ ಸಮಾಲೋಚನೆ ಹಾಗೂ ತಪಾಸಣೆ.
- ಕ್ಯಾನ್ಸರ್ ರೋಗಗಳ ಪರೀಶಿಲನೆ ಹಾಗೂ ಪತ್ತೆ ಮಾಡುವುದು.
- ಕುಟುಂಬ ಕಲ್ಯಾಣ ಆಪ್ತ ಸಮಾಲೋಚನೆ.
- ಶಾಲಾ ಆರೋಗ್ಯ ಕಾರ್ಯಕ್ರಮ.
- ಕ್ಷಯ ರೋಗ ತಪಾಸಣೆ. ಮತ್ತು ಚಿಕಿತ್ಸೆ (ಡಾಟ್ಸ್)
- ಪ್ರಯೋಗಶಾಲಾ ಸೌಲಭ್ಯಗಳು.
- ನಾಯಿ ಕಡಿತಕ್ಕೆ ಒಳಪಟ್ಟವರಿಗೆ ಚುಚ್ಚು ಮದ್ದು ನೀಡುವುದು
- ಜನನಾಂಗ ಮಾರ್ಗದ ಸೋಂಕು / ಲೈಂಗಿಕ ಸಂಪರ್ಕ ಸೋಂಕು ರೋಗಿಗಳಿಗೆ ಅರಿವು ಮೂಡಿಸುವುದು, ತಪಾಸಣೆ ಹಾಗೂ ಚಿಕಿತ್ಸೆ.
- ಮಲೇರಿಯಾ ರಕ್ತ ಲೇಪನ ಸಂಗ್ರಹ ಮತ್ತು ಚಿಕಿತ್ಸೆ.
- ಸಾಮಾನ್ಯ ಖಾಯಿಲೆಗಳಿಗೆ ಚಿಕಿತ್ಸೆ.
- ಸಾಂಕ್ರಮಿಕ ರೋಗ ನಿಯಂತ್ರಣಕ್ಕೆ (ವಿಶೇಷವಾಗಿ ಬೇಸಿಗೆ ಕಾಲದಲ್ಲಿ) ಸಹಾಯ ವೇದಿಕೆ ಸೌಲಭ್ಯ ನೀಡಲಾಗುತ್ತಿದೆ.

## ಆ. ಒಳ ರೋಗಿಗಳ ಸೇವೆಗಳು

- ಎಲ್ಲಾ ಹೆರಿಗೆ ಆಸ್ಪತ್ರೆಗಳಲ್ಲಿ ಸಾಮಾನ್ಯ ಹೆರಿಗೆಯ ಸೇವೆ
- ಶಿಶು ಸ್ನೇಹಪರ ಆಸ್ಪತ್ರೆ
- ಸಂತಾನ ಹರಣ ಶಸ್ತ್ರ ಚಿಕಿತ್ಸೆಗಳು – ಟ್ಯೂಬೆಕ್ಟಮಿ, ಉದರ ದರ್ಶಕ, ನೋಸ್ಕಾಲ್‌ಪಲ್ ವ್ಯಾಸಕ್ಟಮಿ.
- ವೈದ್ಯಕೀಯ ಗರ್ಭಪಾತ
- ಹೆರಿಗೆ ಸಮಯದಲ್ಲಿ ತಾಯಿಯಿಂದ ಮಗುವಿಗೆ ಹರಡುವ ಹೆಚ್.ಐ.ವಿ. ರೋಗವನ್ನು ತಡೆಗಟ್ಟುವುದು
- ಎನ್.ಎಸ್.ಟಿ ಮತ್ತು ಡಾಪ್ಲರ್ ಸೌಲಭ್ಯ

- ಗಂಡಾಂತರ ಹೆರಿಗೆ ಸೌಲಭ್ಯ
- ಸಿಜೇರಿಯನ್ ಹಾಗೂ ವಿವಿದ ರೀತಿಯ ಶಸ್ತ್ರ ಚಿಕಿತ್ಸಾ ಸೌಲಭ್ಯಗಳು
- ಸ್ತ್ರೀ ರೋಗದ ಶಸ್ತ್ರ ಚಿಕಿತ್ಸೆ
- ಮುಂದುವರಿದ ಎಂಡೋಸ್ಕೋಪಿಕ್ ಶಸ್ತ್ರ ಚಿಕಿತ್ಸೆ
- ರೆಫರಲ್ ಆಸ್ಪತ್ರೆಗಳಲ್ಲಿ ಸೋನೋಗ್ರಾಫಿ ಮತ್ತು ಕಾಲ್ಪೋಸ್ಕೋಪಿ ಸೌಲಭ್ಯಗಳು
- ಎಲ್ಲಾ ರೆಫರಲ್ ಆಸ್ಪತ್ರೆ ಮತ್ತು ಹೆರಿಗೆ ಆಸ್ಪತ್ರೆಗಳಲ್ಲಿ ಹುಟ್ಟಿದ ಮಗುವಿಗೆ ಉಚಿತವಾಗಿ ಜನನ ಪ್ರಮಾಣ ಪತ್ರದ ಒಂದು ಪ್ರತಿಯನ್ನು ನೀಡಲಾಗುವುದು.
- ಒಳ ರೋಗಿಗಳಿಗೆ ಉಚಿತ ಹಾಲು ವಿತರಣೆ ಮಾಡಲಾಗುವುದು
- ಅರ್ಹ ಫಲಾನುಭವಿಗಳಿಗೆ ಉಚಿತವಾಗಿ ಮಡಿಲು ಕಿಟ್ ಹಾಗೂ ಜನನಿ ಸುರಕ್ಷಾ ಯೋಜನೆ ಅಡಿಯಲ್ಲಿ ಚೆಕ್ ವಿತರಿಸಲಾಗುವುದು.
- ಸಂತಾನಹರಣ ಶಸ್ತ್ರಚಿಕಿತ್ಸೆ ಫಲಾನುಭವಿಗಳಿಗೆ ಪ್ರೋತ್ಸಾಹಧನ ವಿತರಣೆ.
- " ಶ್ರೀರಾಮಪುರ ರೆಫರಲ್ ಆಸ್ಪತ್ರೆಯಲ್ಲಿ ಉದರ ದರ್ಶಕ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಯ ತರಭೇತಿಯನ್ನು ರಾಜ್ಯದ ವಿವಿಧ ಜಿಲ್ಲೆಗಳ ವೈದ್ಯರಿಗೆ ನೀಡಲಾಗುತ್ತಿದೆ ತರಬೇತಿ ಕೇಂದ್ರವು ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದಿದೆ "
- " ಕರ್ನಾಟಕದಲ್ಲಿ ಮಂಡ್ಯ ಶಿವಮೊಗ್ಗ, ಹಾಗೂ ಹಾಸನದ ನಂತರ ಬೆಂಗಳೂರಿನಲ್ಲಿ ಪ್ರಥಮ ಬಾರಿಗೆ ಐ,ಡಿ (ಇಂಟ್ರಾ ಡರ್ಮಲ್) ರೂಟ್ ಮುಖಾಂತರ ನಾಯಿ ಕಡಿತಕ್ಕೆ ಚುಚ್ಚು ಮದ್ದು ನೀಡಲಾಗುತ್ತಿದೆ. ಈ ಸೌಲಭ್ಯ ಹೊಸಹಳ್ಳಿ ಹಾಗೂ ಶ್ರೀ ರಾಮಪುರ ರೆಫರಲ್ ಆಸ್ಪತ್ರೆಗಳಲ್ಲಿ ಉಚಿತವಾಗಿ ಪಡೆಯಬಹುದಾಗಿದೆ "
- ನಾಯಿ ಕಡಿತದ ಚುಚ್ಚು ಮದ್ದನ್ನು ಪಾಲಿಕೆಯ ಇತರೆ ಎಲ್ಲಾ ಆಸ್ಪತ್ರೆಗಳಲ್ಲಿ ಈ ಹಿಂದಿನಂತೆ ಸೇವಾ ಶುಲ್ಕ ಪಡೆದು ನೀಡಲಾಗುತ್ತಿದೆ (ಬಿ.ಪಿಎಲ್. ಕಾರ್ಡ್ ಹೊಂದಿದವರನ್ನು ಹೊರತುಪಡಿಸಿ)
- ಈ ಆಸ್ಪತ್ರೆಗಳಲ್ಲಿ ದಿನದ 24 ಗಂಟೆಗಳು ತುರ್ತು ಚಿಕಿತ್ಸಾ ವಾಹನ (ಆಂಬ್ಯುಲೆನ್ಸ್) ಸೇವೆಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ
- ಸೇವಾ ಶುಲ್ಕದ ವಿವರಗಳನ್ನು ಎಲ್ಲಾ ಆಸ್ಪತ್ರೆಗಳಲ್ಲಿ ಪ್ರಕಟಿಸಲಾಗಿದೆ.
- ಬೆಂಗಳೂರು ಮಹಾನಗರದಲ್ಲಿರುವ ಹಲವು ಖಾಸಗಿ(ಕೆಂಪೇಗೌಡ, ಡಾ॥ ಅಂಬೇಡ್ಕರ್, ಎಂ.ಎಸ್. ರಾಮಯ್ಯ ಇತ್ಯಾದಿ) ವೈದ್ಯಕೀಯ ಮಹಾ ವಿದ್ಯಾಲಯಗಳ ಕಿರಿಯ ವೈದ್ಯರು ಮತ್ತು ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಹಾಗೂ 200 ಕ್ಕೂ ಹೆಚ್ಚು ನರ್ಸಿಂಗ್ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಪಾಲಿಕೆಯ ಆಸ್ಪತ್ರೆಗಳಲ್ಲಿ ಕ್ಲಿನಿಕಲ್ ತರಬೇತಿ ನೀಡಲಾಗುತ್ತಿದೆ

2. **ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಿಗಳು ಮತ್ತು ಕರ್ತವ್ಯಗಳು:–**

| ಕ್ರ. ಸಂ. | ಹುದ್ದೆ ಮತ್ತು ಹೆಸರು | ಕರ್ತವ್ಯಗಳು |
|---|---|---|
| 1. | **ಸಹಾಯಕ ಶಸ್ತ್ರ ಚಿಕಿತ್ಸಕರು**<br>ಡಾ॥ ಐ.ಕುಸುಮ<br>ಅಧಿಕ ಪ್ರಭಾರ<br>(ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು) | ಹೆರಿಗೆ ಆಸ್ಪತ್ರೆ ಮುಖ್ಯಸ್ಥರಾಗಿದ್ದು ಆಡಳಿತಾತ್ಮಕ ವಿಷಯಕ್ಕೆ ಸಂಬಂಧಿಸಿದ ಬಟವಾಡೆಯ ಕೆಲಸ ಕಾರ್ಯಗಳ ನಿರ್ವಹಣೆ. ಹೊರರೋಗಿಗಳ ತಪಾಸಣೆ, ಲಸಿಕಾ ಕಾರ್ಯಕ್ರಮ, ಗರ್ಭಿಣಿ ಸ್ತ್ರೀಯರನ್ನು ಪರೀಕ್ಷೆ ಮಾಡುವುದು, ವೈದ್ಯಕೀಯ ಗರ್ಭಪಾತ, ಕಾಪರ್–ಟಿ ಅಳವಡಿಸುವುದು, ಔಷಧಿ ಉಗ್ರಾಣ, ಪ್ರಯೋಗಾಲಯದ ಮೇಲ್ವಿಚಾರಣೆ, ಸೇವಾಶುಲ್ಕದ ನಿರ್ವಹಣೆ, ಹಾಗೂ ಬ್ಯಾಂಕ್‌ಗೆ ಜಮಾ ಮಾಡುವುದರ ನಿರ್ವಹಣೆ. ರಾಷ್ಟ್ರೀಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಮತ್ತು ಮಾರ್ಗದರ್ಶನ, ಹೆರಿಗೆಗೆ ಹಾಜರಾಗುವ ಒಳ ರೋಗಿಗಳ ಚಿಕಿತ್ಸೆ, ಪ್ರಸೂತಿ ಗರ್ಭಿಣಿಯ ಹಾಗೂ ಮಕ್ಕಳಿಗೆ ಲಸಿಕೆ ಹಾಕುವ ಕಾರ್ಯಕ್ರಮ, ನಾಯಿ ಕಡಿತಕ್ಕೆ ಚುಚ್ಚು ಮದ್ದು ಮಾಡುವ ಕಾರ್ಯ ಹಾಗೂ ಮೇಲಧಿಕಾರಿಗಳು ಸೂಚಿಸುವಂತೆ ಕಾರ್ಯ ನಿರ್ವಹಿಸುವುದು, ನಾಗರೀಕರ (Citizen Charter) ಹಾಗೂ ರೋಗಿಗಳ ಹಕ್ಕುಗಳ ಮಾಹಿತಿ (Patient Charter) ಎಲ್ಲಾ ಆಸ್ಪತ್ರೆಗಳಲ್ಲಿ ಲಭ್ಯವಿರುವಂತೆ ನೋಡಿಕೊಳ್ಳುವುದು, ಕಾಲಕಾಲಕ್ಕೆ ಮೇಲಾಧಿಕಾರಿಗಳು ನಿಗದಿ ಪಡಿಸಿದ ನಮೂನೆಗಳಲ್ಲಿ ವರದಿ ಸಲ್ಲಿಸುವುದು. ಆಸ್ಪತ್ರೆಯ ಎಲ್ಲಾ ರೀತಿಯ ಬಿಲ್ಲುಗಳು ಕಾಲಕಾಲಕ್ಕೆ ಪಾವತಿ ಆಗುತ್ತಿರುವುದರ ಬಗ್ಗೆ ಮೇಲ್ವಿಚಾರಣೆ. ಆಸ್ಪತ್ರೆಯ ತ್ಯಾಜ್ಯ ವಸ್ತುಗಳ ವಿಂಗಡನೆ ಹಾಗೂ ವಿಲೇವಾರಿ. ಜನನಿ ಸುರಕ್ಷಾ ಯೋಜನೆ, ಮಡಿಲು ಕಿಟ್‌ಗಳ ವಿತರಣೆ, ಯೋಜನೆಗಳನ್ನು ಅನುಷ್ಠಾನಗೊಳಿಸುವುದು. ಸಿಬ್ಬಂದಿಗಳ ಸಮಯ ಪರಿಪಾಲನೆ ಹಾಗೂ ಆಸ್ಪತ್ರೆಯ ಸ್ವಚ್ಛತಾ / ತ್ಯಾಜ್ಯ ವಸ್ತು ವಿಲೇವಾರಿ ಮೇಲ್ವಿಚಾರಣೆ. ಸಿಬ್ಬಂದಿಗಳೊಂದಿಗೆ ವಾರಕ್ಕೊಮ್ಮೆ ಸಭೆ ನಡೆಸುವುದು. ಆಸ್ಪತ್ರೆಯ ಕೆಲಸ ಕಾರ್ಯಗಳಿಗೆ ಸಂಬಂಧಿಸಿದ ಎಲ್ಲಾ ದಾಸ್ತಾನು ಪುಸ್ತಕಗಳ ನಿರ್ವಹಣೆ ಮತ್ತು ಮೇಲಧಿಕಾರಿಗಳ ಮಾಸಿಕ ಸಭೆಗಳಲ್ಲಿ ಭಾಗವಹಿಸುವುದು. ಜನನ ಪ್ರಮಾಣ ಪತ್ರ ಹಂಚಿಕೆ. ಆರೋಗ್ಯ ಶಿಕ್ಷಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. |
| 2. | **ಶುಶ್ರೂಷಕಿಯರು**<br>ಕಾತ್ಯಾಯಿನಿ<br>ಟಿ.ಕೆ. ಪುಷ್ಪಲತಾ<br>ಕೆ.ಪಿ. ಚೌಂದಮ್ಮ | ಶುಶ್ರೂಷಕಿಯರು ಹೆರಿಗೆ ಆಸ್ಪತ್ರೆಗಳಲ್ಲಿ ಸಹಾಯಕ ಶಸ್ತ್ರ ಚಿಕಿತ್ಸಕರೊಂದಿಗೆ ಹೊರರೋಗಿಗಳ ತಪಾಸಣೆ, ಲಸಿಕಾ ಕಾರ್ಯಕ್ರಮ, ಗರ್ಭಿಣಿ ಸ್ತ್ರೀಯರನ್ನು ಪರೀಕ್ಷಿಸುವ ಹಾಗೂ ಪ್ರಸೂತಿ ವೇಳೆಯಲ್ಲಿ ಸಹಕರಿಸುವುದು ಮತ್ತು ಸಹಾಯಕ ಶಸ್ತ್ರ ಚಿಕಿತ್ಸಕರು ಇಲ್ಲದಿರುವಾಗ ಆಸ್ಪತ್ರೆಯ ಮೇಲುಸ್ತುವಾರಿ ನೋಡಿಕೊಳ್ಳುವುದು, ಸಂತಾನ ಹರಣ ಶಸ್ತ್ರ ಚಿಕಿತ್ಸೆಯಲ್ಲಿ ವೈದ್ಯರಿಗೆ ಸಹಾಯ ಮಾಡುವುದು ಆಸ್ಪತ್ರೆಯ ಒಳಗೆ ಮತ್ತು ಹೊರಗೆ ಸ್ವಚ್ಛತೆಯ ಮೇಲ್ವಿಚಾರಣೆ, ಸಾಮಾನ್ಯ ಹೆರಿಗೆಗಳನ್ನು ನಡೆಸುವುದು, ಗಂಡಾಂತರ ಹೆರಿಗೆಗಳನ್ನು ಮುಂಚಿತವಾಗಿಯೇ ವೈದ್ಯರ ಸಲಹೆಯ ಮೇರೆಗೆ ರೆಫರ್ ಮಾಡುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಕಾರ್ಯನಿರ್ವಹಿಸುವುದು. ರಾಷ್ಟ್ರೀಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ. ಆಸ್ಪತ್ರೆಯ ತ್ಯಾಜ್ಯ ವಸ್ತುಗಳ ವಿಂಗಡನೆ ಹಾಗೂ ವಿಲೇವಾರಿ. ಕಾಲಕಾಲಕ್ಕೆ ಮೇಲಾಧಿಕಾರಿಗಳು ನಿಗದಿ ಪಡಿಸಿದ ನಮೂನೆಗಳಲ್ಲಿ ವರದಿ ಸಲ್ಲಿಸುವುದು. ಉಗ್ರಾಣದ ದಾಸ್ತಾನು ನಿರ್ವಹಣೆ ಮತ್ತು ವರದಿ ಸಲ್ಲಿಸುವಿಕೆ. ಪೂರ್ವಯೋಜಿತವಾಗಿ ಹತ್ತಿ, ಬ್ಯಾಂಡೇಜ್, ಸಾಧನೆ ಸಲಕರಣೆಗಳನ್ನು ಆಟೋಕ್ಲೇವ್ ಮಾಡುವುದು. |
| 3. | **ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು**<br>ಹೆಚ್. ಎಸ್. ವಿಜಯಲಕ್ಷ್ಮಿ<br>ಪುಷ್ಪ ನಾಯಕ್ | ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಹೆರಿಗೆ ಆಸ್ಪತ್ರೆಗಳಲ್ಲಿ ಸಹಾಯಕ ಶಸ್ತ್ರ ಚಿಕಿತ್ಸಕರೊಂದಿಗೆ ಹೊರರೋಗಿಗಳ ತಪಾಸಣೆ, ಲಸಿಕಾ ಕಾರ್ಯಕ್ರಮ, ಗರ್ಭಿಣಿ ಸ್ತ್ರೀಯರನ್ನು ಪರೀಕ್ಷಿಸುವ ಹಾಗೂ ಪ್ರಸೂತಿ ವೇಳೆಯಲ್ಲಿ ಸಹಕರಿಸುವುದು ಮತ್ತು ಸಹಾಯಕ ಶಸ್ತ್ರ ಚಿಕಿತ್ಸಕರು ಇಲ್ಲದಿರುವಾಗ ಆಸ್ಪತ್ರೆಯ ಮೇಲುಸ್ತುವಾರಿ ನೋಡಿಕೊಳ್ಳುವುದು, ಸಂತಾನ ಹರಣ ಶಸ್ತ್ರ ಚಿಕಿತ್ಸೆಯಲ್ಲಿ ವೈದ್ಯರಿಗೆ ಸಹಾಯ ಮಾಡುವುದು ಆಸ್ಪತ್ರೆಯ ಒಳಗೆ ಮತ್ತು ಹೊರಗೆ ಸ್ವಚ್ಛತೆಯ ಮೇಲ್ವಿಚಾರಣೆ, ಸಾಮಾನ್ಯ ಹೆರಿಗೆಗಳನ್ನು ನಡೆಸುವುದು, ಗಂಡಾಂತರ ಹೆರಿಗೆಗಳನ್ನು ಮುಂಚಿತವಾಗಿಯೇ ವೈದ್ಯರ ಸಲಹೆಯ ಮೇರೆಗೆ ರೆಫರ್ ಮಾಡುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಕಾರ್ಯನಿರ್ವಹಿಸುವುದು. ರಾಷ್ಟ್ರೀಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ. ಆಸ್ಪತ್ರೆಯ ತ್ಯಾಜ್ಯ ವಸ್ತುಗಳ ವಿಂಗಡನೆ ಹಾಗೂ ವಿಲೇವಾರಿ. ಕಾಲಕಾಲಕ್ಕೆ ಮೇಲಾಧಿಕಾರಿಗಳು ನಿಗದಿ ಪಡಿಸಿದ ನಮೂನೆಗಳಲ್ಲಿ ವರದಿ ಸಲ್ಲಿಸುವುದು. ಉಗ್ರಾಣದ ದಾಸ್ತಾನು ನಿರ್ವಹಣೆ ಮತ್ತು ವರದಿ ಸಲ್ಲಿಸುವಿಕೆ. |

| | | |
|---|---|---|
| 4 | **ಪ್ರಯೋಗಶಾಲಾ ತಜ್ಞರು**<br>ಬಿ.ಎಸ್. ತಾರಾ | ಪ್ರಯೋಗಶಾಲೆಯಲ್ಲಿ ಕಾರ್ಯನಿರ್ವಹಿಸುವುದು. ವೈದ್ಯರು ತಿಳಿಸುವ ರಕ್ತ ಹಾಗೂ ಮೂತ್ರ ಪರೀಕ್ಷೆ, ಕಫ ಪರೀಕ್ಷೆ, ಹಾಗೂ ಮೇಲಾಧಿಕಾರಿಗಳು ಸೂಚಿಸುವಂತೆ ಕಾರ್ಯ ನಿರ್ವಹಿಸುವುದು. |
| 5 | **ದ್ವಿತಿಯ ದರ್ಜೆ ಗುಮಾಸ್ತರು**<br>ಕಾಂತಮ್ಮ.ಬಿ.ಎಸ್. | ಬಟವಾಡೆ ಕೆಲಸ ನಿರ್ವಹಿಸುವುದು. Health card ಗೆ ಸಂಭಂದಪಟ್ಟ ಕಡತಗಳ ನಿರ್ವಹಣೆ, ಆಸ್ಪತ್ರೆಯ ಸೇವಾ ಶುಲ್ಕ ಮತ್ತು ಜನನ ಮರಣ ನೊಂದಣಿ ಕಾರ್ಯ ನಿರ್ವಹಣೆ. ಆಸ್ಪತ್ರೆಗೆ ಸಂಬಂಧಿಸಿದ ಎಲ್ಲಾ ಬಿಲ್ಲುಗಳ ಹಾಗೂ ದಾಖಲಾತಿ ಪುಸ್ತಕಗಳ ನಿರ್ವಹಣೆ. |
| 6. | **ನಾಲ್ಕನೇ ದರ್ಜೆ ನೌಕರರು** | ಪಾಲಿಕೆಯ ವ್ಯಾಪ್ತಿಯಲ್ಲಿರುವ ಪಾಲಿಕೆ ಕಛೇರಿಗಳಿಗೆ ಟಪಾಲು ರವಾನಿಸುವ ಕೆಲಸ ಕಾರ್ಯ ಹಾಗೂ ಕಛೇರಿ ಸಿಬ್ಬಂಧಿಗಳು ಹೇಳುವ ಕೆಲಸ ಕಾರ್ಯಗಳು, ವಾರ್ಡ್‌ಗಳು ಹಾಗೂ ಶಸ್ತ್ರಚಿಕಿತ್ಸಾ ಕೊಠಡಿಗಳಲ್ಲಿ ವೈದ್ಯರ ಆದೇಶದಂತೆ ಕಾರ್ಯನಿರ್ವಹಿಸುವುದು. ಹಾಗೂ ಮೇಲಾಧಿಕಾರಿಗಳು ಸೂಚಿಸುವಂತೆ ಕಾರ್ಯ ನಿರ್ವಹಿಸುವುದು. |
| | ಚಂದ್ರಮ್ಮ,<br>ರಾಣಿ,<br>ಲಕ್ಷ್ಮಮ್ಮ,<br>ದಯಾನಂದ್ | |
| 7 | **ಚಾಲಕರು**<br>ವೆಂಕಟೇಶ್. ಆರ್. | ತುರ್ತು ವಾಹನ ಚಾಲಕರು, ಹಾಗೂ ಮೇಲಾಧಿಕಾರಿಗಳು ಸೂಚಿಸುವಂತೆ ಕಾರ್ಯ ನಿರ್ವಹಿಸುವುದು. ತಿಂಗಳಿಗೆ ಒಂದು ವಾರ ಪಾಲಿಕೆಯ ಕಂಟ್ರೋಲ್ ರೂಮ್‌ನಲ್ಲಿ ಕಾರ್ಯನಿರ್ವಹಣೆ. |

**3 ಮೇಲ್ವಿಚಾರಣೆ ಮತ್ತು ಆಸ್ಪತ್ರೆಗೆ ಒಳಗೊಂಡಂತೆ ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು:-**

ಆಸ್ಪತ್ರೆಗೆ ಬರುವ ರೋಗಿಗಳಿಗೆ ಚಿಕಿತ್ಸೆ ನೀಡುವುದು, ದಾಖಲೆಗಳನ್ನು ನಿರ್ವಹಿಸುವುದು ಅವಶ್ಯಕವಿದ್ದಲ್ಲಿ ಮೇಲಾಧಿಕಾರಿಗಳ ಸಲಹೆ ಪಡೆಯುವುದು. ಹಾಗೂ ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಇರುವ ಕ್ರಮಗಳು. ಕಾಲಕಾಲಕ್ಕೆ ದೈನಂದಿನ / ವಾರದ / ಮಾಸಿಕ / ವಾರ್ಷಿಕ ವರದಿ ಸಲ್ಲಿಸುವಿಕೆ.

**4. ಕಾರ್ಯ ನಿರ್ವಹಿಸುವಲ್ಲಿ ಅನುಸರಿಸುವ ಮಾನದಂಡಗಳು :-**

ಕೆ.ಸಿ.ಎಸ್.ಆರ್, ಕೆ.ಎಂ.ಸಿ ಕಾಯ್ದೆ, ಕರ್ನಾಟಕ ಮೆಡಿಕಲ್ ರೂಲ್ಸ್ ಹಾಗೂ ಮೇಲಾಧಿಕಾರಿಗಳು ಕಾಲಕಾಲಕ್ಕೆ ನೀಡುವ ಸುತ್ತೋಲೆ, ಸೂಚನೆಗಳು ಹಾಗೂ ಆದೇಶಗಳು, ಮುಖ್ಯವಾಗಿ ಮಾನವೀನತೆಯ ಆಧಾರದ ಮೇಲೆ ಕಾರ್ಯ ನಿರ್ವಹಣೆ.

**5. ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಮಯಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳನ್ನು :-**

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976, ಕೆ.ಸಿ.ಎಸ್.ಆರ್, ಸಿ.ಸಿ.ಎ. ನಿಯಮಾವಳಿಗಳು ಹಾಗು ಪಾಲಿಕೆಯು ಕಾಲಕಾಲಕ್ಕೆ ನಿಗದಿಪಡಿಸಿರುವ ಮಾನದಂಡಗಳು ಹಾಗೂ ಮಾನ್ಯ ಆಯುಕ್ತರು ಕಾಲಕಾಲಕ್ಕೆ ನೀಡುವ ಸೂಚನೆಗಳು ಹಾಗೂ ಆಸ್ಪತ್ರೆಯ ಸಂದರ್ಶಕ ಸಮಿತಿಯ ತೀರ್ಮಾನಗಳು, ವೈದ್ಯರ ಮಾಸಿಕ ಹಾಗೂ ಇತರ ಸಭೆಯಲ್ಲಿನ ಆದ ತೀರ್ಮಾನಗಳು.

**6. ಇಲಾಖೆ ಹೊಂದಿರುವ ದಸ್ತಾವೇಜುಗಳ ಪಟ್ಟಿ:-**

1. ಸ್ಟಾಕ್ ಪುಸ್ತಕ
2. ಹಾಜರಾತಿ ಪುಸ್ತಕ
3. ಬಟವಾಡೆ ವಹಿ
4. ನಗದು ಪುಸ್ತಕ
5. ಹೊರರೋಗಿಗಳ ಪುಸ್ತಕ
6. ಗರ್ಭಿಣಿ ತಪಾಸಣಾ ಪುಸ್ತಕ
7. ಲಸಿಕಾ ವಿವರಗಳ ಪುಸ್ತಕ
8. ಇಂಡೆಂಟ್ ಪುಸ್ತಕ
9. ಇನ್ಸ್‌ಪೆಕ್ಷನ್ ಪುಸ್ತಕ
10. ಚಲನವಲನ ಪುಸ್ತಕ
11. ನಾಯಿ ಕಚ್ಚಿದ್ದಕ್ಕೆ ನೀಡಿದ ಚಿಕಿತ್ಸಾ ದಾಖಲಾತಿ ಪುಸ್ತಕ
12. ಟಪಾಲು ಪುಸ್ತಕ
13. ಆರೋಗ್ಯ ಶಿಕ್ಷಣ ಪುಸ್ತಕ
14. ಸೇವಾಶುಲ್ಕ ಪುಸ್ತಕ
15. ತ್ಯಾಜ್ಯ ವಸ್ತು ವಿಲೇವಾರಿ ಪುಸ್ತಕ
16. ಒಳರೋಗಿಗಳ ದಾಖಲಾತಿ ಪುಸ್ತಕ
17. ಹೆರಿಗೆ ವಿವರಗಳ ಪುಸ್ತಕ
18. ಸೇವಾ ಪುಸ್ತಕಗಳು
19. ಡಿ.ಸಿ. ಬಿಲ್ ಪುಸ್ತಕ
20. ಎ.ಸಿ. ಬಿಲ್ ಪುಸ್ತಕ
21. ಬಾಣಂತಿ ತಪಾಸಣೆ ಪುಸ್ತಕ
22. ಆಂಬ್ಯುಲೆನ್ಸ್ ಸರ್ವಿಸ್ ಪುಸ್ತಕ
23. ಡಿಸ್‌ಚಾರ್ಜ್ ಪುಸ್ತಕ
24. ಶಸ್ತ್ರಚಿಕಿತ್ಸಾ ವಿವರಗಳ ಪುಸ್ತಕ
25. ಅನುಪಯುಕ್ತ ವಸ್ತುಗಳ ಪುಸ್ತಕ
26. ಮಡಿಲು ಕಿಟ್ ಪುಸ್ತಕ
27. ಜನನೀ ಸುರಕ್ಷಾ ಯೋಜನೆ ರಿಜಿಸ್ಟರ್

**7. ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅದರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು :–**

ಆಸ್ಪತ್ರೆ ಸಲಹಾ/ದೂರುಪೆಟ್ಟಿಗೆಯನ್ನು ಇರಿಸಲಾಗಿದೆ. ಹಾಗೂ ಅದರ ಮೇಲೆ ವೈದ್ಯಾಧಿಕಾರಿಗಳ ಹಾಗೂ ಅಧೀಕ್ಷಕರ ದೂರವಾಣಿ ಸಂಖ್ಯೆಗಳನ್ನು ನಮೂದಿಸಿದೆ. ಆಗಿಂದ್ದಾಗ್ಗೆ ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸ್ಥಳೀಯ ಮುಖಂಡರು, ಹಾಲಿ ಹಾಗೂ ಮಾಜಿ ಶಾಸಕರು ಮತ್ತು ಪಾಲಿಕಾ ಸದ್ಯಸರು, ವಾರ್ಡ್ ಕಮಿಟಿ ಮೇಂಬರ್ ಮತ್ತು ಸಂದರ್ಶಕ ಸಮಿತಿ ಮಂಡಳಿ ಇವರುಗಳ ಸಲಹೆ ಹಾಗೂ ಸೂಚನೆಗಳನ್ನು ಪಾಲಿಸಲಾಗುತ್ತಿದೆ. ಪ್ರತಿ ಮೂರು ತಿಂಗಳಿಗೆ ಹಾಗೂ ಅವಶ್ಯವಿದ್ದಲ್ಲಿ ಆಗಿಂದ್ದಾಗ್ಗೆ ಸಂದರ್ಶಕ ಸಮಿತಿಯ ಸಭೆ ನಡೆಸಲಾಗುತ್ತದೆ ಅದರಲ್ಲಿ ಸಂಬಂಧ ಪಟ್ಟ ಅಧೀಕ್ಷಕರು ಹಾಗೂ ಎಲ್ಲಾ ವೈದ್ಯರು ಹಾಜರಾಗಿ, ಆ ಸಭೆಯ ಸೂಚನೆ, ಸಲಹೆ ಹಾಗೂ ತಿರ್ಮಾನಗಳನ್ನು ಅನುಷ್ಠಾನಕ್ಕೆ ತರಲಾಗುತ್ತದೆ.

**8. ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳೂ ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರಪಟ್ಟಿಕೆ:–**

ಆಸ್ಪತ್ರೆ ಸಂದರ್ಶಕ ಸಮಿತಿ, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ, ಸಭೆಯ ನಡವಳಿಕೆಗಳು ಆಯಾ ಕಛೇರಿಗಳಲ್ಲಿ ಲಭ್ಯವಿರುತ್ತವೆ.

**9. ಯಶವಂತಪುರ ಹೆರಿಗೆ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ವರ್ಗದವರ ನಿರ್ದೇಶಿಕೆ**

| ಕ್ರ. ಸಂ. | ಹೆಸರು ಮತ್ತು ಹುದ್ದೆ | ಕಛೇರಿ ವಿಳಾಸ | ದೂರವಾಣಿ ಸಂಖ್ಯೆ |
|---|---|---|---|
| 1. | ಡಾ॥ ಐ. ಕುಸುಮ.<br>ಅಧಿಕ ಪ್ರಭಾರ<br>ಮೊಬೈಲ್:– 9480683801 | ಯಶವಂತಪುರ ಕಾರ್ಪೋರೇಶನ್ ಹೆರಿಗೆ ಆಸ್ಪತ್ರೆ, ಹೆರಿಗೆಯಶವಂತಪುರ ರೈಲ್ವೆ ಸ್ಟೇಷನ್ ಹತ್ತಿರ, ಯಶವಂತಪುರ, ಬೆಂಗಳೂರು – 560 022. | 22975681 |
| 2 | ಕಾತ್ಯಾಯಿನಿ<br>**ಶುಶ್ರೂಷಕಿಯರು** | | |
| 3 | ಟಿ.ಕೆ. ಪುಷ್ಪಲತಾ<br>**ಶುಶ್ರೂಷಕಿಯರು** | | |
| 4 | ಕೆ.ಪಿ. ಚೌಂದಮ್ಮ<br>**ಶುಶ್ರೂಷಕಿಯರು** | | |
| 5 | ಹೆಚ್. ಎಸ್. ವಿಜಯಲಕ್ಷ್ಮಿ<br>**ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು** | | |
| 6 | ಪುಷ್ಪ ನಾಯಕ್,<br>**ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು** | | |
| 7 | ಬಿ.ಎಸ್. ತಾರಾ<br>**ಪ್ರಯೋಗಶಾಲಾ ತಜ್ಞರು** | | |
| 8 | ಕಾಂತಮ್ಮ.ಬಿ.ಎಸ್.<br>**ದ್ವಿತಿಯೆ ದರ್ಜೆ ಗುಮಾಸ್ತರು** | | |
| 9 | ಚಂದ್ರಮ್ಮ,<br>**ಆಯಾ** | | |
| 10 | ರಾಣಿ,<br>**ಆಯಾ** | | |

| | | | |
|---|---|---|---|
| **11** | ಲಕ್ಷ್ಮಮ್ಮ,<br>**ಪಿ.ಕೆ.** | | |
| **12** | ದಯಾನಂದ್,<br>**ಜವಾನ** | | |
| **13** | ವೆಂಕಟೇಶ್<br>**ಚಾಲಕರು** | | |
| **14** | ಮುತ್ತುರಾಮನ್,<br>**ಎಸ್.ಟಿ.ಎಲ್.ಎಸ್** | | |
| **15** | ದೇವರಾಜ್,<br>**ಎಸ್.ಟಿ..ಎಸ್** | | |
| **16** | ರಂಗನಾಥ್<br>**ಹೆಚ್.ವಿ.** | | |

**10.** ನಿಯಮಾನುಸಾರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು.

| **ಕ್ರಮ ಸಂಖ್ಯೆ** | **ಹೆಸರು ಮತ್ತು ಹುದ್ದೆ** | **ವೇತನ ಶ್ರೇಣಿ** | **ಮೂಲ ವೇತನ** |
|---|---|---|---|
| 1 | ಎನ್. ನಾಗಮ್ಮ<br>ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು | 8000-14800 | 14800 |
| 2 | ಪುಷ್ಪನಾಯಕ್<br>ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು | 8000-14800 | 3300 |
| 3 | ಜಿ. ಶ್ರೀನಿವಾಸ್<br>ದ್ವಿತಿಯೆ ದರ್ಜೆ ಗುಮಾಸ್ತಕರು | 5800-10500 | 6500 |
| 4 | ಪುಟ್ಟಲಕ್ಷ್ಮಮ್ಮ<br>ಆಯಾ | 5200-8200 | 8000 |
| 5 | ರಾಣಿ<br>ಆಯಾ | 5200-8200 | 6000 |
| 6 | ಹೆಚ್. ಜಯರಾಮ್<br>ಜವಾನರು | 5200-8200 | 9000 |
| 7 | ಜಿ. ಗಂಗಪ್ಪ,<br>ಜವಾನರು | 1300 Fixed | 1300 |
| 8 | ಮಹದೇವಮ್ಮ<br>ಜವಾನರು | 1300 Fixed | 1300 |
| 9 | ಎನ್. ದಯಾನಂದ್<br>ಪಿ.ಕೆ | 5200-8200 | 5200 |
| 10 | ರಾಜಮ್ಮ<br>ದೋಬಿ | 5200-8200 | 7800 |

**XI. 2008–09 ನೇ ಯಾವ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ನಿಗದಿಪಡಿಸಲಾದ ಅನುದಾನದ ಕ್ರಮಗಳು :–**

14– ಆರೋಗ್ಯ ವೈದ್ಯಕೀಯ, ಆಡಳಿತ ವೆಚ್ಚಗಳು ಸಿಬ್ಬಂದಿ ವೇತನ.

**XII. ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನಗಳನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು :–**

ಯಾವುದು ಇಲ್ಲ.

**XIII. ಅದು ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರಿ ಪತ್ರಗಳನ್ನು ಪಡೆಯುವವರ ವಿವರಗಳು:–**

ಬಡತನದ ರೇಖೆಗಿಂತ ಕೆಳಗಿರುವವರು, ಸಂದರ್ಶಕ ಸಮಿತಿಯಿಂದ ಸೂಚಿಸಲ್ಪಟ್ಟ ವ್ಯಕ್ತಿಗಳು, ಹಾಗೂ ಮೇಲಾಧಿಕಾರಿಗಳ ಅನುಮತಿಯೊಂದಿಗೆ ಬಡ ವ್ಯಕ್ತಿಗಳಿಗೆ ಆಸ್ಪತ್ರೆಯ ಶುಲ್ಕವನ್ನು ಮನ್ನಾ ಮಾಡಲಾಗುತ್ತದೆ.

**XIV. ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರಗಳು :–**

ಯಾವುದು ಇಲ್ಲ.

**XV. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು :–**

ಯಾವುದು ಇಲ್ಲ.

**XVI. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳನ್ನು**

| ಸಾರ್ವಜನಿಕ ಮಾಹಿತಿ ಅಧಿಕಾರಿ | ಮೊದಲನೆ ಮೇಲ್ಮನವಿ ಪ್ರಾಧಿಕಾರಿ | ಎರಡನೆ ಮೇಲ್ಮನವಿ ಪ್ರಾಧಿಕಾರಿ |
|---|---|---|
| **ಮುಖ್ಯ ಆರೋಗ್ಯಾಧಿಕಾರಿ<br>2ನೇ ಮಹಡಿ, ಅನೆಕ್ಸ್ ಕಟ್ಟಡ,<br>ಬೃ.ಬೆಂ.ಮ.ಪಾ.<br>ಎನ್.ಆರ್.ಚೌಕ. ಬೆಂಗಳೂರು – 02.<br>ದೂರವಾಣಿ ಸಂಖ್ಯೆ:– 22112019** | **ಉಪ ಆಯುಕ್ತರು (ಆರೋಗ್ಯ)<br>2ನೇ ಮಹಡಿ, ಅನೆಕ್ಸ್ ಕಟ್ಟಡ,<br>ಬೃ.ಬೆಂ.ಮ.ಪಾ.<br>ಎನ್.ಆರ್.ಚೌಕ. ಬೆಂಗಳೂರು – 02.<br>ದೂರವಾಣಿ ಸಂಖ್ಯೆ:– 22975591** | **ಆಯುಕ್ತರು,<br>ಕರ್ನಾಟಕ ಮಾಹಿತಿ ಆಯೋಗ<br>3ನೇ ಮಹಡಿ,<br>ಬಹು ಮಹಡಿ ಕಟ್ಟಡ,<br>ಅಂಬೇಡ್ಕರ್ ವೀದಿ,<br>ಬೆಂಗಳೂರು – 01** |

**XVII. ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ತರುವಾಯ ಪ್ರತಿವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೂ ಪರಿಷ್ಕರಿಸತಕ್ಕದ್ದು.**

ಸದರಿ ಆಸ್ಪತ್ರೆಗೆ ಸಂಬಂಧಿಸಿದಂತೆ ಸಾಮಾನ್ಯ ಮಾಹಿತಿಗಳನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.
www.bmponline .org

ವೈದ್ಯಾಧಿಕಾರಿ
ಯಶವಂತಪುರ ಹೆರಿಗೆ ಆಸ್ಪತ್ರೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು